# MYSORE CENSUS, 1921.

## PART IV.

## TALUKWAR TABLES.

BY

V. R. THYAGARAJAIYAR, M.A.,

SUPERINTENDENT OF CENSUS OPERATIONS, MYSORE STATE.

BANGALORE.

PRINTED AT THE GOVERNMENT PRESS.

1922.

# CENSUS, 1921.

## Part IV.

## NOTE.

For the Imperial Tables contained in Part II of the Census Report, the district or the city is the territorial unit and figures are therein given separately for those units. In the tables contained in this Part, the Taluk or Sub-Taluk is the territorial unit and figures are given for each of these. (Figures for the cities and the Kolar Gold Fields (City) area are also given). There are eight tables in this part and this brief note is to indicate some of the purposes for which they may be useful.

*Table I.*—The table gives the population by sex for 1921 and the totals for 1911. In addition, the area, the number of inhabited towns and villages, the number of houses, the percentage of variation since 1911 and the density in 1921 are given. These figures are required constantly for administrative purposes in connection with questions relating to birth and death rates, education, incidence of taxation and the like.

*Table II.*—As this table gives the total population for the previous Censuses as well as the present Census, the intercensal variations since 1871 and the effect of famine or other calamities on the growth of the population can be ascertained. Besides, this table will show whether the population of a taluk is progressive or not. A slight decrease between any two Censuses may be due to causes peculiar to the decade, but if the population shows no increase or shows a noticeable decrease for a long period, the causes therefor will require investigation. As examples of taluks showing such decreases may be mentioned, Nagar, Chikmagalur and Hunsur.

*Table III.*—Towns and villages are classified according to their population. Towns are places having some kind of municipal administration. This table serves as an index of the conditions in a taluk. If relatively to the area and population, there is a large number of villages in the higher groups the taluk should be considered more prosperous than one where the number is small.

*Table IV.*—This table contains the distribution of population by Religion and Literacy. Statistics for the five main religions are given separately. Sikhs, Budhists, Jews, Parsis and Brahmos are shown together in the column for "others". By comparing with previous tables, the actual increase and the rate of increase among the followers of different religions may be found.

Literacy figures are given by age periods 0-15, 15-20 and 20 upwards. The total number of literates is the sum of the figures in these columns. The extent of literacy can be ascertained by finding the proportion to the total population and the progress of education by comparing the total literates with the corresponding figures in the tables for the previous Censuses.

*Table V.*—The several languages spoken in a taluk are classified as under.—

(1) Kannada, (2) other vernaculars of the State, (3) other Asiatic Languages and (4) other Languages. The names of languages included under the last three heads are given on the title page of the table.

*Table VI.*—The Birth districts returned at the Census are shown under.—

(1) Mysore-born, (2) born in India outside State, (3) born in other parts of Asia and (4) born in countries beyond Asia.

Mysore-born persons are further distinguished into those born in the district of enumeration and those born in other districts of the State. This and the preceding table indicate the extent to which the population of a taluk is indigenous and how much of it is foreign. Except in taluks contiguous to British India, population other than Mysore-born gives a measure of the foreign element. In those taluks a proportion of Non-Mysore born persons will be indigenous. Persons speaking Non-Mysore Vernaculars are more likely to be foreigners than natives of Mysore.

*Table VII.*—Statistics of 23 important Hindu castes, 3 Musalman tribes and of the Indian Christains and of Lambanis among Animists are given separately. These statistics will be useful when caste figures are required for the discussion of educational or other problems. A comparison with the corresponding table of the previous Censuses will show if, and how, particular communities were affected by the conditions of the decade.

*Table VIII.*—This table gives the statistics of occupation by sub-classes of the occupation scheme. In that scheme all the occupations are classified under :—

| | |
|---|---|
| (1) 4 Classes | (3) 56 Orders |
| (2) 12 Sub-classes | (4) 191 Groups. |

In Imperial Table XVII, in Part II details are given under each of the items for the districts and cities. The statistics given here will show to what extent the population is dependant on agriculture as the principal means of livelihood and also the scope for introducing non-agricultural forms of occupations.

## ೧೯೧೧ನೆಯ ಇಸವಿಯ ಸೆನ್ಸಸ್ ರಿಪೋರ್ಟಿನ ೪ನೆಯ ಭಾಗ.

---

### ಸೂ ಚ ನೆ.

---

ಈ ಸಲದ ಸೆನ್ಸಸ್ಸಿಗೆ ಸಂಬಂಧಪಟ್ಟ ರಿಪೋರ್ಟಿನ ೨ನೆಯ ಭಾಗದಲ್ಲಿರುವ ಇಂಪೀರಿಯಲ್ ತಃಖ್ತೆಗಳಲ್ಲಿ ಒಂದೊಂದು ಡಿಸ್ಟ್ರಿಕ್ಟ್ ಅಥವಾ ನಗರವನ್ನು ಅಂಶವನ್ನಾಗಿ ತೆಗೆದುಕೊಂಡು ಅಂಕೆಗಳನ್ನು ಕೊಟ್ಟಿದೆ. ರಿಪೋರ್ಟಿನ ೪ನೆಯ ಭಾಗವಾದ ಈ ಪುಸ್ತಕದಲ್ಲಿಯ ತಃಖ್ತೆಗಳಲ್ಲಿ ಒಂದೊಂದು ತಾಲ್ಲೂಕ್ ಅಥವಾ ಸಬ್ ತಾಲ್ಲೂಕನ್ನು ಅಂಶವಾಗಿ ತೆಗೆದುಕೊಂಡು ತಪ್ಸೀಲುಗಳನ್ನು ತೋರಿಸಿದೆ. ಹೀಗೆ ತೋರಿಸುವಲ್ಲಿ ನಗರಗಳಿಗೂ ಪ್ರತ್ಯೇಕವಾಗಿ ತಪ್ಸೀಲನ್ನು ನಮೂದಿಸಿರುತ್ತೆ. ಈ ಭಾಗದಲ್ಲಿ ಇರತಕ್ಕ ಒಟ್ಟು ಎಂಟು ತಃಖ್ತೆಗಳು ಯಾವ ಯಾವ ರೀತಿಯಲ್ಲಿ ಉಪಯೋಗಕ್ಕೆ ಬರಬಹುದು ಎಂಬುವುದನ್ನು ಇಲ್ಲಿ ಸಂಕ್ಷೇಪವಾಗಿ ಸೂಚಿಸಿದೆ.

೧ನೆಯ ತಃಖ್ತೆ.—ಈ ತಃಖ್ತೆಯಲ್ಲಿ ೧೯೧೧ನೆಯ ಸೆನ್ಸಸ್ಸಿನ ಪ್ರಕಾರ ಪ್ರಜಾ ಸಂಖ್ಯೆಯೂ, ಹೆಂಗಸರ ಮತ್ತು ಗಂಡಸರ ತಪ್ಸೀಲೂ, ೧೯೦೧ನೆಯ ಸೆನ್ಸಸ್ಸಿನ ಪ್ರಕಾರ ಪ್ರಜಾ ಸಂಖ್ಯೆಯೂ ನಮೂದಾಗಿವೆ. ಇವುಗಳ ಜೊತೆಗೆ ಒಂದೊಂದು ಅಂಶದ ವಿಸ್ತೀರ್ಣ, ಅದರಲ್ಲಿರುವ ಬೆಚಾಕ್ ಗ್ರಾಮಗಳ ಮತ್ತು ಪಟ್ಟಣಗಳ ಸಂಖ್ಯೆ, ಒಟ್ಟು ಮನೆಗಳ ಸಂಖ್ಯೆ, ೧೯೦೧ನೆಯ ಇಸವಿಯಿಂದ ಇದುವರೆಗೆ ಆಗಿರುವ ಶೇಕಡಾ ವ್ಯತ್ಯಾಸ ಮತ್ತು ೧೯೧೧ನೆಯ ಸೆನ್ಸಸ್ಸಿನ ಪ್ರಕಾರ ಜನ ಬಾಹುಳ್ಯ ಇವುಗಳನ್ನು ಕುರಿತ ತಪ್ಸೀಲನ್ನು ಕೊಟ್ಟಿದೆ. ಜನನ ಮರಣಗಳ ಪರಿಮಿತಿಯನ್ನು ಲೆಕ್ಕಹಾಕುವುದರಲ್ಲಿಯೂ, ವಿದ್ಯಾಭ್ಯಾಸ, ಇಸಂವಾರು ತೆರಿಗೆಯ ದರ ಮುಂತಾದ ಆಡಳಿತದ ಮತ್ತು ಇತರ ವಿಷಯಗಳ ವಿಮರ್ಶೆಗಳಲ್ಲಿಯೂ ಈ ಅಂಕೆಗಳು ಬೇಕಾಗುತ್ತವೆ.

೨ನೆಯ ತಃಖ್ತೆ.—ಈ ತಃಖ್ತೆಯಲ್ಲಿ ಈ ಸೆನ್ಸಸ್ಸಿನ ಪ್ರಕಾರದ ಪ್ರಜಾ ಸಂಖ್ಯೆಯೊಂದಿಗೆ ಹಿಂದಣ ಸೆನ್ಸಸ್ಸುಗಳ ಪ್ರಜಾ ಸಂಖ್ಯೆಯನ್ನೂ ಮತ್ತು ೧೮೭೧ನೆಯ ಇಸವಿಯಿಂದ ಈಚಿನ ಸೆನ್ಸಸ್ ಸೆನ್ಸಸ್ಸಿಗೂ ಆಗಿರುವ ವ್ಯತ್ಯಾಸದ ದರವನ್ನೂ ತೋರಿಸಿರುವುದರಿಂದ ಕ್ಷಾಮ ಮುಂತಾದ ಅನಾಹುತಗಳು ಪ್ರಜಾ ವೃದ್ಧಿಯನ್ನು ಯಾವ ರೀತಿ ಕೆಡಿಸುವುವೆಂಬುದನ್ನು ಇದರಿಂದ ತಿಳಿಯಬಹುದು. ಅಲ್ಲದೆ ಯಾವುದಾದರೊಂದು ತಾಲ್ಲೂಕಿನ ಪ್ರಜೆಯು ಒಟ್ಟಿನಲ್ಲಿ ವೃದ್ಧಿಯಾಗುತ್ತಿದೆಯೋ ಇಲ್ಲವೋ ಎಂಬುದು ಈ ತಃಖ್ತೆಯಿಂದ ತೋರಿಬರುವುದು. ಯಾವುದಾದರೂ ಎರಡು ಸೆನ್ಸಸ್ಸುಗಳನ್ನು ಮಾತ್ರ ತೆಗೆದುಕೊಂಡಲ್ಲಿ ಪ್ರಜೆಯು ಸ್ವಲ್ಪ ಕಡಿಮೆಯಾಗಿದ್ದರೆ ಅದು ಆ ಸೆನ್ಸಸ್ಸುಗಳ ಮಧ್ಯಕಾಲದಲ್ಲಿದ್ದ ಯಾವುದಾದರೂ ವಿಶೇಷಕಾರಣಗಳಿಂದ ಉಂಟಾದದ್ದು ಎನ್ನಬಹುದಾದರೂ, ಬಹುಕಾಲದವರೆಗೆ ಈ ರೀತಿಯ ನಷ್ಟವಾಗಲೀ ಅಥವಾ ಬಹು ಮಿತವಾದ ವೃದ್ಧಿಯಾಗಲೀ ಯಾವುದಾದರೊಂದು ತಾಲ್ಲೂಕಿನ ಪ್ರಜೆಯಲ್ಲಿ ತೋರುವುದಾದರೆ ಈ ಅವಸ್ಥೆಗೆ ಕಾರಣವೇನೆಂಬುದನ್ನು ವಿಚಾರಮಾಡಬೇಕಾಗುವುದು. ಈ ರೀತಿಯಲ್ಲಿ ಪ್ರಜಾ ಸಂಖ್ಯೆಯಲ್ಲಿ ನಷ್ಟವನ್ನು ತೋರುವ ತಾಲ್ಲೂಕುಗಳಿಗೆ ನಗರ, ಚಿಕ್ಕಮಗಳೂರು ಮತ್ತು ಹುಣಸೂರು ಇವು ಉದಾಹರಣೆಗಳು.

೩ನೆಯ ತಃಖ್ತೆ.—ಈ ತಃಖ್ತೆಯಲ್ಲಿ ಪಟ್ಟಣಗಳನ್ನೂ ಹಳ್ಳಿಗಳನ್ನೂ ಅವುಗಳ ಜನ ಸಂಖ್ಯೆಗೆ ಅನುಗುಣವಾಗಿ ವಿಂಗಡಿಸಿದೆ. ಯಾವುದಾದರೊಂದು ತರದ ಮುನಿಸಿಪಲ್ ಆಡಳಿತಕ್ಕೆ ಸೇರಿರುವ ಊರುಗಳನ್ನೆಲ್ಲಾ ಪಟ್ಟಣಗಳೆಂದು ಗಣಿಸಿದೆ. ಒಂದೊಂದು ತಾಲ್ಲೂಕಿನ ಅಭಿವೃದ್ಧಿ ಸ್ಥಿತಿಗತಿಗಳನ್ನು ಈ ತಃಖ್ತೆಯಿಂದ ಸ್ವಲ್ಪಮಟ್ಟಿಗೆ ತಿಳಿಯಬಹುದು. ವಿಸ್ತೀರ್ಣ ಮತ್ತು ಜನ ಸಂಖ್ಯೆಗಳಿಗೆ ಅನುಗುಣವಾಗಿ ಎಷ್ಟು ಇರಬಹುದೋ ಅದಕ್ಕಿಂತ ಯಾವ ತಾಲ್ಲೂಕಿನಲ್ಲಿಯಾದರೂ ದೊಡ್ಡ ಊರುಗಳು ಹೆಚ್ಚಾಗಿದ್ದಲ್ಲಿ ಅಂಥಾ ತಾಲ್ಲೂಕು ಅದಕ್ಕಿಂತ ಕಡಿಮೆ ಸಂಖ್ಯೆಯ ದೊಡ್ಡ ಗ್ರಾಮಗಳು ಇರುವ ತಾಲ್ಲೂಕಿಗಿಂತ ಅಭಿವೃದ್ಧಿಸ್ಥಿತಿಯಲ್ಲಿದೆಯೆಂದು ಎಣಿಸಬೇಕಾಗುತ್ತೆ.

೪ನೆಯ ತಃಖ್ತೆ.—ಈ ತಃಖ್ತೆಯಲ್ಲಿ ಮತ ಮತ್ತು ವಿದ್ಯಾಭ್ಯಾಸಗಳ ತಪ್ಸೀಲನ್ನು ತೋರಿಸುವ ಸಂಖ್ಯೆಗಳನ್ನು ಕೊಟ್ಟಿದೆ. ಹಿಂದು, ಮುಸಲ್ಮಾನ್, ಕ್ರೈಸ್ತ, ಜೈನ ಮತ್ತು ಕಾಡುಜನ ಎಂಬ ಐದು ಮತಗಳಿಗೆ ಪ್ರತ್ಯೇಕ ತಪ್ಸೀಲನ್ನು ಕೊಟ್ಟು ಸಿಕ್, ಬೌದ್ಧ, ಯಹೂದ್ಯ, ಪಾರ್ಸಿ ಮತ್ತು ಬ್ರಾಂಹೋ ಇವರನ್ನು "ಇತರರು" ಎಂಬ ಮದ್ದಿನಲ್ಲಿ ಸೇರಿಸಿ ತೋರಿಸಿದೆ. ಹಿಂದಣ ಸೆನ್ಸಸ್ಸುಗಳ ಈ ವಿಷಯಕ್ಕೆ ಸಂಬಂಧಪಟ್ಟ ತಃಖ್ತೆಗಳೊಂದಿಗೆ ಹೋಲಿಸಿ ನೋಡಿದರೆ ಮತವಾರು ಪ್ರಜೆಯ ವೃದ್ಧಿಯೂ, ವೃದ್ಧಿಯ ದರವೂ ತೋರಿಬರುವುವು. ವಿದ್ಯಾಭ್ಯಾಸಕ್ಕೆ ಸಂಬಂಧಪಟ್ಟ ಅಂಕೆಗಳನ್ನು ೦–೧೫, ೧೫–೨೦ ಮತ್ತು ೨೦ಕ್ಕೆ ಮೇಲ್ಪಟ್ಟವರು ಎಂಬ ೩ ವಿಭಾಗವಾಗಿ

ಕೊಟ್ಟಿದೆ. ಈ ಮೂರು ಭಾಗಗಳ ಮೊತ್ತವೇ ವಿದ್ಯಾಭ್ಯಾಸ ಮಾಡಿರುವ ಒಟ್ಟು ಜನರ ಸಂಖ್ಯೆ. ವಿದ್ಯೆಯನ್ನರಿತವರು ಒಟ್ಟು ಜನರಲ್ಲಿ ಎಷ್ಟನೆಯ ಭಾಗವೆಂಬುದನ್ನು ಗಣಿಸುವುದರಿಂದ ವಿದ್ಯಾಭ್ಯಾಸದ ಪ್ರಸರಣೆಯನ್ನೂ ಹಿಂದಣ ಸೆನ್ಸಸ್ಸುಗಳ ತಃಖ್ತೆಗಳೊಂದಿಗೆ ಈ ತಃಖ್ತೆಯ ಅಂಕೆಗಳನ್ನು ಹೋಲಿಸುವುದರಿಂದ ವಿದ್ಯಾಭ್ಯಾಸವು ಮುಂದುವರಿಯುತ್ತಿರುವುದನ್ನೂ ತಿಳಿಯಬಹುದು.

<u>೫ನೆಯ ತಃಖ್ತೆ.</u>—ಒಂದೊಂದು ತಾಲ್ಲೂಕಿನಲ್ಲಿಯೂ ಜನರು ಆಡುವ ಭಾಷೆಗಳನ್ನು ೪ ಭಾಗವಾಗಿ ವಿಂಗಡಿಸಿದೆ.—

(೧) ಕನ್ನಡ, (೨) ಸಂಸ್ಥಾನದ ಇತರ ದೇಶೀಯ ಭಾಷೆಗಳು, (೩) ಏಷ್ಯಾಖಂಡದ ಇತರ ಭಾಷೆಗಳು, (೪) ಉಳಿದ ಎಲ್ಲಾ ಭಾಷೆಗಳು.

೨, ೩ ಮತ್ತು ೪ನೆಯ ತರಗತಿಗಳಲ್ಲಿ ಸೇರಿಸಿರುವ ಭಾಷೆಗಳು ಯಾವುವೆಂಬುವನ್ನು ತಃಖ್ತೆಯ ಮೇಲಣ ಪುಟದಲ್ಲಿ ವಿವರಿಸಿದೆ.

<u>೬ನೆಯ ತಃಖ್ತೆ.</u>—ಈ ಸೆನ್ಸಸ್ಸಿನಲ್ಲಿ ನಮೂದಾಗಿ ಬಂದ ಜನ್ಮಸ್ಥಳಗಳನ್ನು ಈ ನಾಲ್ಕು ಭಾಗವಾಗಿ ವಿಂಗಡಿಸಿದೆ.—

(೧) ಮೈಸೂರು ದೇಶದಲ್ಲಿಯ ಸ್ಥಳಗಳು, (೨) ಇಂಡಿಯಾ ದೇಶದ ಇತರ ಭಾಗಗಳಲ್ಲಿಯವು, (೩) ಏಷ್ಯಾಖಂಡದ ಇತರ ಭಾಗಗಳಲ್ಲಿಯವು, (೪) ಪ್ರಪಂಚದ ಇತರ ಭಾಗಗಳಲ್ಲಿಯವು.

ಮೈಸೂರಿನಲ್ಲಿ ಜನಿಸಿದವರೆಂಬವರನ್ನು ಎಣಿಕೆಯಾದ ಡಿಸ್ಟ್ರಿಕ್ಟಿನಲ್ಲಿ ಜನಿಸಿದವರು, ಸಂಸ್ಥಾನದ ಇತರ ಡಿಸ್ಟ್ರಿಕ್ಟುಗಳಲ್ಲಿ ಜನಿಸಿದವರು ಎಂದು ಎರಡು ಉಪಭಾಗಗಳಾಗಿ ವಿಂಗಡಿಸಿದೆ. ಈ ತಃಖ್ತೆಯಿಂದಲೂ ಹಿಂದಣ ತಃಖ್ತೆಯಿಂದಲೂ ಯಾವುದಾದರೂ ಒಂದು ತಾಲ್ಲೂಕಿನ ಪ್ರಜೆಯು ಎಷ್ಟರಮಟ್ಟಿಗೆ ದೇಶೀಯ; ಎಷ್ಟರ ಮಟ್ಟಿಗೆ ವಿದೇಶೀಯ ಎಂಬುದು ತೋರಿಬರುವುದು. ಬ್ರಿಟಿಷ್ ಇಂಡಿಯಾದೇಶಕ್ಕೆ ಲಗತ್ತಾಗಿರುವ ತಾಲ್ಲೂಕುಗಳ ವಿನಾ ಬೇರೆ ತಾಲ್ಲೂಕುಗಳಲ್ಲೆಲ್ಲಾ ಸಂಸ್ಥಾನದಲ್ಲಿ ಜನಿಸಿದ್ದಲ್ಲದ ಪ್ರಜೆಯೆಲ್ಲವೂ ಪ್ರಾಯಶಃ ವಿದೇಶೀಯವು. ಬ್ರಿಟಿಷ್ ಇಂಡಿಯಾಕ್ಕೆ ಲಗತ್ತಾಗಿರುವ ತಾಲ್ಲೂಕುಗಳಲ್ಲಿ ಮೈಸೂರು ದೇಶದಲ್ಲಿ ಜನಿಸದಂಥ ಪ್ರಜೆಯಲ್ಲಿಯೂ ಸ್ವಲ್ಪ ಭಾಗವು ದೇಶದ್ದೇ ಆಗಿರುವುದು. ಸಂಸ್ಥಾನಕ್ಕೆ ಸಂಬಂಧಪಡದ ಭಾಷೆಗಳನ್ನು ಮಾತೃಭಾಷೆಯನ್ನಾಗಿ ಉಳ್ಳ ಪ್ರಜೆಯು ಪ್ರಾಯಶಃ ವಿದೇಶೀಯವಾಗಿಯೇ ಇರುವುದು.

<u>೭ನೆಯ ತಃಖ್ತೆ.</u>—ಈ ತಃಖ್ತೆಯಲ್ಲಿ ಹಿಂದೂ ಮತದ ಜಾತಿಗಳಲ್ಲಿ ಮುಖ್ಯವೆನ್ನಬಹುದಾದ ೨೩ ಜಾತಿ, ಮುಸಲ್ಮಾನರ ೩ ಪಂಗಡ, ಇಂಡಿಯನ್ ಕ್ರಿಶ್ಚಿಯನ್ನರು ಮತ್ತು ಲಂಬಾಣಿಗಳು ಇವರ ಸಂಖ್ಯೆಯ ತಪ್ಸೀಲನ್ನು ತೋರಿಸಿದೆ. ವಿದ್ಯಾಭ್ಯಾಸ ಅಥವಾ ಇತರ ವಿಷಯಗಳ ಚರ್ಚೆಯಲ್ಲಿ ಜಾತಿವಾರು ಪ್ರಜಾ ಸಂಖ್ಯೆ ಬೇಕಾದಾಗ ಈ ತಪ್ಸೀಲುಗಳು ಉಪಯೋಗಕ್ಕೆ ಬರುವುವು. ಹಿಂದಣ ಸೆನ್ಸಸ್ಸಿನ ಈ ಸಂಬಂಧದ ತಃಖ್ತೆಯೊಂದಿಗೆ ಹೋಲಿಸಿ ನೋಡಿದರೆ ೧೯೧೧ ರಿಂದ ೧೯೨೧ರ ವರೆಗಿನ ಕಾಲದಲ್ಲಿ ಆಯಾ ಜಾತಿಯ ಪ್ರಜೆಯು ಯಾವರೀತಿಯಲ್ಲಿ ಎಷ್ಟರ ಮಟ್ಟಿಗೆ ವೃದ್ಧಿಯಾಗಿದೆ ಎಂಬುದು ತಿಳಿಯುವುದು.

<u>೮ನೆಯ ತಃಖ್ತೆ.</u>—ಈ ತಃಖ್ತೆಯಲ್ಲಿ ಉದ್ಯೋಗದ ಮುಖ್ಯ ಪಂಗಡಗಳಿಗೆ ಸಂಬಂಧಪಟ್ಟ ತಪ್ಸೀಲುಗಳನ್ನು ತೋರಿಸಿದೆ. ಉದ್ಯೋಗಗಳನ್ನು ತರಗತಿವಾರು ವಿಂಗಡಿಸುವುದರಲ್ಲಿ ೪ ಭಾಗಗಳು, ೧೨ ಉಪಭಾಗಗಳು, ೫೬ ತರಗತಿಗಳು ಮತ್ತು ೧೯೧ ಗುಂಪುಗಳು ಹೀಗೆಂದು ವಿಂಗಡಿಸಿದೆ. ಈ ಸೆನ್ಸಸ್ಸಿಗೆ ಸಂಬಂಧಪಟ್ಟ ರಿಪೋರ್ಟಿನ ೨ನೆಯ ಭಾಗದಲ್ಲಿ ಉದ್ಯೋಗವನ್ನು ಕುರಿತ ೧೬ನೆಯ ತಃಖ್ತೆಯಲ್ಲಿ ಡಿಸ್ಟ್ರಿಕ್ಟು ನಗರಗಳಿಗೆಲ್ಲಾ ಈ ಮೇಲೆ ಹೇಳಿದ ಭಾಗ, ಉಪಭಾಗ, ತರಗತಿ, ಗುಂಪು ಎಂಬ ಒಂದೊಂದು ಅಂಶಕ್ಕೂ ತಪ್ಸೀಲನ್ನು ತೋರಿಸಿದೆ. ಇಲ್ಲಿ ಕೊಟ್ಟಿರುವ ತಪ್ಸೀಲಿನಿಂದ ದೇಶದ ಪ್ರಜೆಯು ಎಷ್ಟರ ಮಟ್ಟಿಗೆ ವ್ಯವಸಾಯವನ್ನೇ ಜೀವನಕ್ಕೆ ಮುಖ್ಯೋಪಾಯವಾಗಿ ಪಡೆದಿದೆ ಎಂಬುದೂ, ವ್ಯವಸಾಯವಲ್ಲದೆ ಬೇರೆ ಉದ್ಯೋಗಗಳನ್ನು ಜನರಲ್ಲಿ ವಾಡಿಕೆಗೆ ತರುವುದಕ್ಕೆ ಅವಕಾಶವೆಷ್ಟಿದೆ ಎಂಬುದೂ ತಿಳಿದು ಬರುವುದು.

WD2294—GPB—550—12-10-22

# TABLE OF CONTENTS.

## ಅನುಕ್ರಮಣಿಕೆ.


| | | Pages.<br>ಪುಟಗಳು. |
|---|---|---|
| Note<br>ಸೂಚನೆ | .... .... .... ....<br>.... .... .... .... | i—iv |
| Table<br>ತಃಖ್ತೆ | I.—Area and Population of Taluks .... ....<br>I.—ತಾಲ್ಲೂಕುಗಳ ವಿಸ್ತೀರ್ಣ ಮತ್ತು ಪ್ರಜಾ ಸಂಖ್ಯೆ .... .... | 1 |
| Table<br>ತಃಖ್ತೆ | II.—Population since 1871 .... ....<br>II.—1871 ನೇ ಇಸವಿಲಾಗಾಯ್ತು ಪ್ರಜಾ ಸಂಖ್ಯೆ .... .... | 9 |
| Table<br>ತಃಖ್ತೆ | III.—Towns and Villages classified by Population ....<br>III.—ಪ್ರಜಾ ಸಂಖ್ಯೆಯ ಪ್ರಕಾರ ಪಟ್ಟಣಗಳ ಮತ್ತು ಗ್ರಾಮಗಳ ಕ್ಲಾಸುವಾರು ಸಂಖ್ಯೆ .... | 13 |
| Table<br>ತಃಖ್ತೆ | IV.—Population of Cities and Taluks by Religion and Education.<br>IV.—ಪಟ್ಟಣ ಮತ್ತು ತಾಲ್ಲೂಕುಗಳ ಪ್ರಜೆಗಳ ಮತವೂ ಓದು ಬರಹವೂ .... | 21 |
| Table<br>ತಃಖ್ತೆ | V.—Language (Mother-tongue) .... ....<br>V.—ಮಾತೃ ಭಾಷೆ .... .... .... | 29 |
| Table<br>ತಃಖ್ತೆ | VI.—Birth-place .... .... ....<br>VI.—ಹುಟ್ಟಿದ ಸ್ಥಳ .... .... .... | 37 |
| Table<br>ತಃಖ್ತೆ | VII.—Caste, Tribe, Race or Nationality .... ....<br>VII.—ಜಾತಿ .... .... .. | 45 |
| Table<br>ತಃಖ್ತೆ | VIII.—Occupation .... .... ....<br>VIII.—ಉದ್ಯೋಗ ... .. .... | 83 |